ಶ್ರೀ ಜೆ. ಬಸವಣ್ಣೆಪ್ಪ (ಸಮಾಜ ಕಲ್ಯಾಣ ಸಚಿವರು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ರೋಣ ನಗರದ ಪರಿಶಿಷ್ಟ ಜಾತಿ ಬಾಲಕಿಯರ ವಿದ್ಯಾರ್ಥಿನಿಲಯದ ಕಾಮಗಾರಿಯನ್ನು ಕರ್ನಾಟಕ ಭೂಸೇನಾ ನಿಗಮಕ್ಕೆ ಪಹಿಸಲಾಗಿದ್ದು, ೧೯೮೬–೮೮ನೇ ಸಾಲಿನಲ್ಲಿ ನಿರ್ಮಾಣದ ಕಾರ್ಯಾದೇಶವನ್ನು ಕೈಗೊಳ್ಳಲಾಗುವುದು.

ಸಬ್‌ರಿಜಿಸ್ಟ್ರಾರ್ ಆಫೀಸಿನಲ್ಲಿ ನೋಂದಾವಣೆ ಶುಲ್ಕ

೫೨೧. ಶ್ರೀ ಆರ್. ವೆಂಕಟರಾವಮಯ್ಯ (ವಂಗಳಬಾಗಿಲು) .—ಮಾನ್ಯ ಕಂದಾಯ, ಯೋಜನಾ ಮತ್ತು ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ಉಪನೋಂದಣಿ ಕಛೇರಿಗಳಲ್ಲಿ ನೋಂದಣಿ ಶುಲ್ಕವೆಂದು ಸಾವಿರಕ್ಕೆ ೨೦ ರೂ.ಗಳಂತೆಯೂ ಮತ್ತು ಸ್ಟ್ಯಾಂಪ್ ಶುಲ್ಕವೆಂದು ೧೦ ಸಾವಿರದ ನಂತರ ಸಾವಿರಕ್ಕೆ ೩೫ ರೂ. ಗಳಂತೆಯೂ ವಸೂಲಿ ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಕಾಯಿದೆಯಲ್ಲಿ ಈ ಬಗ್ಗೆಯ ವಸೂಲಾತಿಗೆ ಅವಕಾಶವಿಲ್ಲವಿರುವುದರಿಂದ ಸರ್ಕಾರದವರು ಈ ಬಗ್ಗೆ ಕೈಗೊಳ್ಳುವ ಕ್ರಮವೇನು ?

ಇ) ಸದರಿ ಕಛೇರಿಗಳಲ್ಲಿ ನೋಂದಣಿ ಶುಲ್ಕವೂ ಅತೀ ಹೆಚ್ಚಾಗುತ್ತಿದ್ದು ಬಡವರಿಗೆ ತೊಂದರೆಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದಲ್ಲಿ ಈ ಶುಲ್ಕವನ್ನು ಕಡಿಮೆ ಮಾಡಲು ಸರ್ಕಾರವು ಕ್ರಮ ಕೈಗೊಳ್ಳುವರೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನಾ ಮತ್ತು ಕಾರ್ಮಿಕ ಮಂತ್ರಿಗಳು).—

ಅ) ಸರ್ಕಾರದ ಅಧಿಸೂಚನೆ ಕ್ರಮ ಸಂಖ್ಯೆ ಆರ್. ಡಿ. ೪೦೩ ಇ. ಎಸ್. ಆರ್. ೮೫ ದಿನಾಂಕ ೨೭–೫–೮೬ರ ಅನ್ವಯ ನೋಂದಣಿ ಶುಲ್ಕ ಪ್ರತಿ ಸಾವಿರಕ್ಕೆ ರೂ. ೨೦ ರಂತೆ ದಿನಾಂಕ ೨–೬–೧೯೮೬ ರಿಂದ ವಸೂಲು ಮಾಡಲಾಗುತ್ತಿದೆ. ರೂ. ೧೦,೦೦೦–೦೦ ಮೀರಿದ ಸಾಲಕ್ಕೆ ಬರೆದುಕೊಡುವ ದಸ್ತಾವೇಜುಗಳಿಗೆ ಮುದ್ರಾಂಕ ಶುಲ್ಕ ಹಾಗೂ ಅಧಿಭಾರ ಶುಲ್ಕವೂ ಸೇರಿದಂತೆ ಪ್ರತಿ ಸಾವಿರಕ್ಕೆ ರೂ. ೨೫–೦೦ ರೂ. ೩೫–೦೦ ಹಾಗೂ ೪೫–೦೦ ರೂ.ಗಳಂತೆ ಅಧಿಭಾರವೂ ಆಯಾ ಸ್ಥಳಗಳಲ್ಲಿ ಜಾರಿ ಇರುವಂತೆ ಪ್ರತಿಶತ ೧, ೨ ಹಾಗೂ ೩ ಪ್ರಕಾರ ವಸೂಲಿ ಮಾಡಲಾಗುತ್ತಿದೆ.

ಆ) ಈ ಶುಲ್ಕವನ್ನು ಕಾನೂನು ರೀತಿ ವಸೂಲು ಮಾಡಲಾಗುತ್ತಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ನೋಂದಣಿ ಶುಲ್ಕವು ನ್ಯಾಯಬದ್ಧವಾಗಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಪ್ರಶ್ನೆ '' ಇ '' ಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯದ ಕಟ್ಟಡ ಕುರಿತು.

೫೮೯. ಶ್ರೀ ನೀಲಕಂಠ ಗೌಡ್ರು (ಶಿಗ್ಗಾಂ).— ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ಶಿಗ್ಗಾಂ ತಾಲ್ಲೂಕು ದುಂದಶಿ ಗ್ರಾಮದಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿ ನಿಲಯದ ಕಟ್ಟಡವನ್ನು ಕಟ್ಟುವ ವಿಚಾರವೇನಾದರೂ ಇದೆಯೇ ?

ಆ) ಹಾಗಿದ್ದಲ್ಲಿ ಎಂದು ನಿರ್ಮಾಣ ಕಾರ್ಯ ಪ್ರಾರಂಭಿಸಲಾಗುವುದು,